ಖನಿಜಾಂಶ ಮಿಶ್ರಣ - ಪ್ರಾಮುಖ್ಯತೆ

- ಹಾಲು ಉತ್ಪಾದನ ಹೆಚ್ಚಿಸುತ್ತದೆ
- ರೋಗ ನಿರೋಧಕತೆಯನ್ನು ಹೆಚ್ಚಿಸುತ್ತದೆ
- ಕರುವಿನ ಬೆಳವಣಿಗೆ ಹೆಚ್ಚಿಸುತ್ತದೆ
- ಪೋಷಕಾಂಶಗಳ ಬಳಕೆ ಉತ್ತಮಗೊ-ಳುತ್ತದೆ

- ಹಾಲು ಜ್ವರ ಕಿಟೋಸಿಸ್ ರೋಗವ-ನ್ನು ತಡೆಯುತ್ತದೆ
- ಸಂತಾನೋತ್ಪತ್ತಿ ಸಾಮರ್ಥ್ಯ ಸುಧಾ-ರಿಸುತ್ತದೆ

ಅಜೋಲಾ

ಅಜೋಲಾ ಒಂದು ಸಿಹಿ ನೀರಿನ ಜರೀಗಿಡವಾಗಿದ್ದು, ಇದು ಕೊಳಗಳು, ಸರೋವರಗಳು, ಜೌಗು ಪ್ರದೇಶಗಳು, ಉಷ್ಣವಲಯ ಹಾಗೂ ಉಪಉಷ್ಣವಲಯದ ವಾತಾವರಣದಲ್ಲಿ ಬೆಳೆಯುತ್ತದೆ. ಅಜೋಲಾ ಸಸ್ಯವು ನೀಲ ಹಸಿರು ಪಾಚಿ ಎಂಬ ಅನಾಬಿನಾ ಜೊತೆಗೂಡಿ, ವಾಯುಮಂಡಲದಲ್ಲಿರುವ ಸಾರಜನಕವನ್ನು ಅಮೋನಿಯವನ್ನಾಗಿ ಪರಿವರ್ತಿಸುತ್ತದೆ.

* ಉಪಯೋಗಗಳು :

- ಅಜೋಲಾವನ್ನು ಹಸು, ಎಮ್ಮೆ, ಕೋಳಿ, ಬಾತುಕೋಳಿ ಮತ್ತು ಮೀನುಗಳಿಗೆ ಮೇವಾಗಿ ಬಳಸಬಹುದು.
- ಪಶು ಆಹಾರವನ್ನಾಗಿ ಅಜೋಲಾವನ್ನು ಕೊಟ್ಟಲ್ಲಿ ಪಶುವಿನ ಆರೋಗ್ಯ ಚೆನ್ನಾಗಿರುತ್ತದೆ
- ಹಾಲು ಕೊಡುವ ಎಮ್ಮೆ ಅಥವಾ ಹಸುಗಳಿಗೆ 1.5-2 kg ಅಜೋಲಾ ಕೊಟ್ಟರೆ ಸುಮಾರು 15-20% ಹಾಲಿನ ಉತ್ಪಾದನೆ ಹೆಚ್ಚಾಗುವುದು ಹಾಗೂ 0.3-0.7% ಕೊಬ್ಬಿನಾಂಶವು ಹೆಚ್ಚಾಗುವುದು.



ಬೆದೆಯ ಲಕ್ಷಣಗಳು

ಮುಂಬೆದೆ ಲಕ್ಷಣಗಳು

⇒ ಬೆದೆಗೆ ಬಂದ ಜಾನುವಾರುಗಳ ಮೇಲೆ ಹಾರಲು ಪ್ರಯತ್ನಿಸುವುದು

⇒ ಹಾಲು ಉತ್ಪತ್ತಿ ಕಡಿಮೆಯಾಗುವುದು

⇒ ಬೆದರಿದಂತೆ ಕಾಣುವುದು

⇒ ಆಗಾಗ್ಗೆ ಮೂತ್ರ ವಿಸರ್ಜನೆ ಮಾಡುವುದು

⇒ ಯೋನಿಯಿಂದ ತೆಳುವಾದ ಲೋಳೆ ಹೇರಳವಾಗಿ ಸುರಿಯುವುದು

ಮಧ್ಯಬೆದೆ ಲಕ್ಷಣಗಳು

⇒ ಈ ಸಮಯದಲ್ಲಿ ಬೇರೆ ಜಾನುವಾರುಗಳನ್ನು ತನ್ನ ಮೇಲೆ ಹತ್ತಲು ಸಹಕರಿಸುವುದು

⇒ ಯೋನಿ ದ್ವಾರದ ತುಟಿಗಳು ಊದಿರುವುದು

⇒ ಬಾಲ ಎತ್ತಿ ಹಿಡಿಯುವುದು

⇒ ಮಂದ ಲೋಳೆ ಮತ್ತು ಕಡಿಮೆ ಪ್ರಮಾಣದಲ್ಲಿ ಸುರಿಯುವುದು.

ಹಿಂಬೆದೆ ಲಕ್ಷಣಗಳು

⇒ ಯೋನಿ ಊತ ಹಾಗೂ ಲೋಳೆ ಸೋರುವಿಕೆ ಕಡಿಮೆಯಾಗಿರುವುದು

⇒ ಲೋಳೆ ಮಂದವಾಗಿರುವುದು

⇒ ಬೇರೆ ದನಗಳು ತನ್ನ ಮೇಲೆ ಹಾರಲು ಸಹಕರಿಸುವುದು.

⇒ ಬೆದರುವಿಕೆ ಕಡಿಮೆಯಾಗುವುದು.



ಮುಂಬೆದೆ (8 ಗಂಟೆಗಳು) | ಮಧ್ಯಬೆದೆ (16 ಗಂಟೆಗಳು) | ಹಿಂಬೆದೆ (24 ಗಂಟೆಗಳು)

ಸ್ವಚ್ಛ ಹಾಲಿನ ಉತ್ಪಾದನೆ :-

1. ಸ್ವಚ್ಛ ಹಾಗೂ ರೋಗ ರಹಿತ ಪಶುಗಳು

2. ಓರಣವಾಗಿರುವ ಮತ್ತು ಸ್ವಚ್ಛವಾಗಿರುವ ಕೊಟ್ಟಿಗೆ



3. ಶುದ್ಧ ಕುಡಿಯುವ ನೀರು

4. ಓರಣವಾಗಿರುವ ಮತ್ತು ಸ್ವಚ್ಛವಾಗಿರುವ ಸ್ಟೇನಲಸ್ ಸೀಲಿನ ಪಾತ್ರೆಗಳು.



5. ಹಾಲು ಕರೆಯುವ ಮೊದಲು ಕೈಗಳನ್ನು ಸಾಬೂನಿನಿಂದ ತೊಳೆದುಕೊಳ್ಳಿ

6. ಕೆಚ್ಚಲನ್ನು ಶುದ್ಧನೀರಿನಿಂದ ತೊಳೆದು ಸ್ವಚ್ಛ ಬಟ್ಟೆಯಿಂದ ಹೊರಿಸಿ



7. ಪ್ರತಿ ತೊಟ್ಟಿನಿಂದ ಹೊರಸೂಸುವ ಹಾಲಿನ ಮೊದಲ ಧಾರೆಯನ್ನು ಹೊರಚೆಲ್ಲಿರಿ

8. ಹಾಲನ್ನು ಕರೆಯುವ ವ್ಯಕ್ತಿ ಸ್ವಚ್ಛವಾಗಿರಬೇಕು ಮತ್ತು ಆರೋಗ್ಯವಂತರಾಗಿರಬೇಕು.



9. ಹಾಲನ್ನು ಕರೆಯುವಾಗ ಹಸುವಿಗೆ ಹಸಿರು ಮೇವನ್ನು ನೀಡಿರಿ.

10. ಹಾಲನ್ನು ಕರೆದ ನಂತರ ಕೆಚ್ಚಲನ್ನು ಜೀವಾಣುನಾಶಕ ದ್ರಾವಣದಲ್ಲಿ ಮುಳುಗಿಸಿರಿ ಅಥವಾ ಸ್ಪ್ರೇ ಮಾಡಿ.



ರಸಮೇವು ತಯಾರಿಕೆ

1. ಮೇವಿನ ಬೆಳೆಯನ್ನು ಕೊಯ್ಲು ಮಾಡುವುದು.

2. ಕೊಯ್ಲು ಮಾಡಿದ ಮೇವನ್ನು ಕತ್ತರಿಸುವುದು

3. ಸೈಲೋದಲ್ಲಿ ಕತ್ತರಿಸಿದ ಮೇವನ್ನು ತುಂಬಿ ಮತ್ತು ಅದನ್ನು ಒತ್ತುವುದು.

4. ಗಾಳಿ ಮತ್ತು ನೀರಿನ ಪ್ರವೇಶವನ್ನು ತಡೆಗಟ್ಟಲು ಸೈಲೋವನ್ನು ಸೀಲಿಂಗ್ ಮಾಡುವುದು.

5. 45 ದಿನಗಳವರೆಗೆ ಹುದುಗುವಿಕೆಗಾಗಿ ಸೈಲೋದಲ್ಲಿ ಕತ್ತರಿಸಿದ ಮೇವನ್ನು ಬಿಡುವುದು, ನಂತರ ಅದು ರಸಮೇವು ಆಗಿ ತಯಾರಾಗುತ್ತದೆ.

6. ರಸಮೇವನ್ನು ದನಗಳಿಗೆ ಕೊಡುವುದು. ಇದರಿಂದ ಜಾನುವಾರುಗಳ ಉತ್ಪಾದಕತೆ ಹೆಚ್ಚಿಸುತ್ತದೆ.

ಕರುಗಳ ಲಸಿಕೆ ಕಾರ್ಯಕ್ರಮದ ಪಟ್ಟಿ

ರೋಗದ ಹೆಸರು	ಕರುವಿನ ವಯಸ್ಸು	ಪುನರಾವರ್ತನೆ
ಕಾಲುಬಾಯಿ ಜ್ವರ	3 ಮತ್ತು 9 ತಿಂಗಳುಗಳಲ್ಲಿ ಬೂಸ್ಟರ್ ಡೋಸ್	ವರ್ಷಕ್ಕೆ 2 ಸಲ
ಚಪ್ಪೆ ರೋಗ	5 ತಿಂಗಳು	ವರ್ಷಕ್ಕೊಮ್ಮೆ
ಗಂಟಲು ರೋಗ	5 ರಿಂದ 6 ತಿಂಗಳು	ವರ್ಷಕ್ಕೊಮ್ಮೆ
ನರಡಿ ರೋಗ	3 ತಿಂಗಳು	ವರ್ಷಕ್ಕೊಮ್ಮೆ
ಗರ್ಭಪಾತ ರೋಗ	6-9 ತಿಂಗಳು (ಹೆಣ್ಣು ಕರುಗಳು ಮಾತ್ರ	ಇಲ್ಲ

ಹಾಲಿನ ಪೋಷಕಾಂಶಗಳು

ಪ್ರೋಟೀನ್ =165g
ಜೀವಕೋಶದ ಬೆಳವಣಿಗೆ

ವಿಟಮಿನ್. ಎ =135g
ಕಣ್ಣಿನ ಆರೋಗ್ಯಕ್ಕಾಗಿ

ಕಾರ್ಬೋಹೈಡ್ರೇಟ್ಸ್ =24g
ಶಕ್ತಿ ಉತ್ಪಾದನೆಗೆ

ಕ್ಯಾಲ್ಸಿಯಂ =620mg
ಶಕ್ತಿಯುತ ಮೂಳೆ ಹಾಗೂ ಹಲ್ಲುಗಳಿಗೆ



ವಿಟಮಿನ್. ಬಿ. =12-25mg
ಕೆಂಪು ರಕ್ತ ಕಣಗಳ ಉತ್ಪಾದನೆ

ರಂಜಕ =455mg
ಶಕ್ತಿಯ ಉತ್ತಮ ಬಿಡುಗಡೆಗಾಗಿ

ಝಿಂಕ್ =2mg
ರೋಗ ನಿರೋಧಕ ಶಕ್ತಿಗೆ

ವಿಟಮಿನ್. ಡಿ =257mL
ಶಕ್ತಿಯುತ ಮೂಳೆ

ಪಶು ಸಂಗೋಪನ ಇಲಾಖೆಯ ಸೌಲಭ್ಯಗಳು

→ ಪಶು ಭಾಗ್ಯ ಯೋಜನೆ.

→ ಜಾನುವಾರು ವಿಮೆ.

→ ಬರಡು ರಾಸು ಶಿಬಿರಗಳು.

→ ಕುರಿ/ಮೇಕೆ ಮರಣದ ಪರಿಹಾರ ಧನ.

→ ಮೇವು ಕತ್ತರಿಸುವ ಯಂತ್ರಗಳ ವಿತರಣೆ.

→ ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ಉಚಿತ ಜಾನುವಾರ ವಿಮೆ ಮಾಡಿಸುವುದು.

→ ಎಮ್ಮೆ/ದನಗಳು ಆಕಸ್ಮಿಕವಾಗಿ ಆಗುವ ಅಪಘಾತದಿಂದ ಆರ್ಥಿಕ ನಷ್ಟ ಅನುಭವಂತರಿಗೆ ಪರಿಹಾರ ಧನದ ಯೋಜನೆ.

17/09/2024 12:17

ಸಂಪೂರ್ಣ ಮಿಶ್ರಿತ ಆಹಾರ

ಹಸಿರು ಮೇವು (ಕತ್ತರಿಸಿ) - 30 Kg

+

ಒಣಹುಲ್ಲು (ಕತ್ತರಿಸಿ) - 7 Kg

+

ಫೀಡ್ಸ್

+

ಖನಿಜಾಂಶ ಮಿಶ್ರಣ

ಇದರ ಮಿಶ್ರಣವನ್ನು ದಿನಕ್ಕೆ 03 ಬಾರಿ ಕೊಡಿ.

ಲಾಭಗಳು :-

→ ಹಾಲಿನ ಇಳುವರಿ ಹೆಚ್ಚುತ್ತದೆ

→ ಆಹಾರ ಉತ್ತಮವಾಗಿ ಜೀರ್ಣವಾಗುತ್ತದೆ

→ ಮೇವಿನ ಸಂಪೂರ್ಣ ಬಳಕೆ

→ ಎಲ್ಲಾ ಪೋಷಕಾಂಶಗಳು ಸಿಗುತ್ತದೆ.

17/09/2024 12:17

ದನಗಳು ಮತ್ತು ಎಮ್ಮೆಗಳಲ್ಲಿ ಕಂಡುಬರುವ ಸಾಂಕ್ರಾಮಿಕ ರೋಗ ನಿಯಂತ್ರಣಕ್ಕೆ ಲಸಿಕೆಗಳು

ರೋಗ	ಪ್ರಥಮ ಲಸಿಕೆ	ವಾರ್ಷಿಕ ಲಸಿಕೆ	ತಿಂಗಳು
ಕಾಲುಬಾಯಿ ಜ್ವರ	3 ತಿಂಗಳು ಮೇಲ್ಪಟ್ಟ ವಯಸ್ಸು	ವರ್ಷಕ್ಕೆ ಎರಡು ಬಾರಿ	ಮಾರ್ಚ್ & ಆಗಸ್ಟ್
ಗಂಟಲು ಬೇನೆ	4 ತಿಂಗಳು ವಯಸ್ಸು	ವರ್ಷಕ್ಕೊಮ್ಮೆ	ಮೇ-ಜೂನ್
ಚಪ್ಪೆ ರೋಗ	5 ತಿಂಗಳ ವಯಸ್ಸು	ವರ್ಷಕ್ಕೊಮ್ಮೆ	ಜೂನ್
ನರಡಿ ರೋಗ	6 ತಿಂಗಳ ವಯಸ್ಸು	ವರ್ಷಕ್ಕೊಮ್ಮೆ	ಫೆಬ್ರುವರಿ - ಮಾರ್ಚ್.

-: ಕೃತಕ ಗರ್ಭಧಾರಣೆಯ ಪ್ರಯೋಜನಗಳು :-

→ ಗೂಳಿಯಿಂದ ಹರಡುವ ರೋಗಗಳ ನಿಯಂತ್ರಣ.

→ ಆಕಳುಗಳಿಂದ ಗೂಳಿಗೆ ಹರಡುವ ರೋಗಗಳ ನಿಯಂತ್ರಣ.

→ ಹೆಚ್ಚಿನ ಜಾನುವಾರುಗಳಿಗೆ ಗರ್ಭಧಾರಣೆ ಮಾಡಬಹುದು.



→ ದೇಶದ ಅತ್ಯುತ್ತಮ ಗೂಳಿಯಿಂದ ವೀರ್ಯವನ್ನು ಸಂಗ್ರಹಿಸಿ ಘನೀಕರಿಸಬಹುದು ಇದರಿಂದ ಅನೇಕ ವರ್ಷ ಲಕ್ಷಾಂತರ ಹಸುಗಳ ಗರ್ಭಧಾರಣೆ ಮಾಡಬಹುದು.

→ ಗರ್ಭಕೋಶದ ಕಾಯಿಲೆಗಳನ್ನು ಗುರುತಿಸಿ ತಕ್ಕ ಚಿಕಿತ್ಸೆ ಮಾಡಬಹುದು.

→ ಶಾರೀರಿಕ ಸರಿಸಮಾನತೆ ಇಲ್ಲದಿದ್ದರೂ, ಗರ್ಭಧಾರಣೆ ಮಾಡಬಹುದು.

→ ಶೀಘ್ರ ತಳಿ ಅಭಿವೃದ್ಧಿ ಪಡಿಸಲು ಸಾಧ್ಯ.

ಗರ್ಭಧಾರಣೆ ಮಾಡಿಸಿದನಂತರ ಪುನ 21 ದಿನಗಳಲ್ಲಿ ಬೆದೆಗೆ ಬಾರದಿದ್ದರೆ ಕೃತಕ ಗರ್ಭಧಾರಣೆ ಮಾಡಿದ ತಾರೀಖಿನಿಂದ 2 ರಿಂದ 3 ತಿಂಗಳ ಅವಧಿಯಲ್ಲಿ ಪಶುವೈದ್ಯರಿಂದ ಗರ್ಭಪರೀಕ್ಷೆ ಮಾಡಿಸಿ ಖಚಿತಪಡಿಸಿಕೊಳ್ಳಬೇಕು. ಗರ್ಭಾವಸ್ಥೆಯ ಕಾಲ ಆಕಳುಗಳಲ್ಲಿ ಸರಾಸರಿ 9 ತಿಂಗಳು ಮತ್ತು ಎಮ್ಮೆಗಳಲ್ಲಿ 10 ತಿಂಗಳು ಆಗಿದೆ.

ಹಾಲು ಕುಡಿಯುವ ಮಿಶ್ರತಳಿ ಕರುಗಳ ಪೋಷಣೆ

ವಯಸ್ಸು	ಪ್ರತಿನಿತ್ಯ ಕುಡಿಸಬೇಕಾದ ಹಾಲು (ಕಿ.ಗ್ರಾಂ)	ಕರುಗಳ ಪ್ರಾರಂಭಿಕ ಸಮತೋಲನ ಆಹಾರ (ಗ್ರಾಂ)	ಒಣಗಿಸಿದ ಗರಿಕೆ ರೋಡ್ಸ್ ಹುಲ್ಲು ಅಲ-ಸಂದೆ ಕುದುರೆಮಸಾಲೆಸೊಪ್ಪು	ಕುಡಿಯುವ ನೀರು (ಲೀ)
01-4 ದಿನ	ಗಿಣ್ಣು ಹಾಲು	—	—	—
05-14 ದಿನ	2 ರಿಂದ 5	—	—	—
3ನೇ ವಾರ	05	100	ತಿನ್ನುವಷ್ಟು	—
4ನೇ ವಾರ	05	500	ತಿನ್ನುವಷ್ಟು	—
5ನೇ ವಾರ	04	500	ತಿನ್ನುವಷ್ಟು	—
6ನೇ ವಾರ	03	1000	ತಿನ್ನುವಷ್ಟು	—
7ನೇ ವಾರ	02	1500	ತಿನ್ನುವಷ್ಟು	ಕುಡಿಯುವಷ್ಟು
8ನೇ ವಾರ	02	1500	ತಿನ್ನುವಷ್ಟು	ಕುಡಿಯುವಷ್ಟು
9ನೇ ವಾರ	02	2000	ತಿನ್ನುವಷ್ಟು	ಕುಡಿಯುವಷ್ಟು
10ನೇ ವಾರ	01	2000	ತಿನ್ನುವಷ್ಟು	ಕುಡಿಯುವಷ್ಟು
11ನೇ ವಾರ	01	2000	ತಿನ್ನುವಷ್ಟು	ಕುಡಿಯುವಷ್ಟು
12ನೇ ವಾರ	01	2500	ತಿನ್ನುವಷ್ಟು	ಕುಡಿಯುವಷ್ಟು
13ನೇ ವಾರ	00	2500	ತಿನ್ನುವಷ್ಟು	ಕುಡಿಯುವಷ್ಟು
14ನೇ ವಾರ	00	2500	ತಿನ್ನುವಷ್ಟು	ಕುಡಿಯುವಷ್ಟು

ಕಾಲು ಬಾಯಿ ರೋಗದ ನಿಯಂತ್ರಣ

ಔಷಧಿ ಮತ್ತು ಲಸಿಕೆಗಳು :-

1) ವಿವಿಧ ಜಾತಿಯ ಕಾಲು ಬಾಯಿ ಜ್ವರದ ಸೋಂಕು ನಿವಾರಣೆಗೆ ಲಸಿಕೆಗಳು ಇವೆ. (FMD ಲಸಿಕೆ). ಆದರೆ ಇವುಗಳ ಸೋಂಕು ತಡೆಯುವ ಶಕ್ತಿ ಕೇವಲ 6 ತಿಂಗಳು.

2) ಮುಖ್ಯವಾಗಿ ನೇರ ಅಥವಾ ಪರೋಕ್ಷ ಸಂಪರ್ಕ ತಪ್ಪಿಸಿದರೆ ರೋಗ ಹರಡುವುದನ್ನು ತಡೆಯಬಹುದು.

3) ಬಾಯಿತೊಳೆಯುವ ಪ್ರಾತಿನಾಶಕ ದ್ರವಗಳಿಂದ ಇಲ್ಲವೇ ಕಾಲಿಗೆ ಕಟ್ಟುವಂಥ ಔಷಧಿಗಳಿಂದ ಜ್ವರಕ್ಕೆ ಚಿಕಿತ್ಸೆ ಮಾಡಬಹುದು.

ಬೇಕಾಗುವ ಪದಾರ್ಥಗಳು

ಜೀರಿಗೆ - 10 ಗ್ರಾಂ, ಮೆಂತ್ಯೆ - 10 ಗ್ರಾಂ, ಮೆಣಸು - 10 ಗ್ರಾಂ
ಅರಿಶಿಣ - 10 ಗ್ರಾಂ, ಬೆಳ್ಳುಳ್ಳಿ 4 ಎಸಳು
ತೆಂಗಿನಕಾಯಿ - 1, ಬೆಲ್ಲ - 120 ಗ್ರಾಂ.

ತಯಾರಿಸುವ ವಿಧಾನ

ಜೀರಿಗೆ, ಮೆಂತ್ಯೆ, ಮೆಣಸನ್ನು 20-30 ನಿಮಿಷಗಳ ಕಾಲ ನೆನಸಿ ಎಲ್ಲಾ ಪದಾರ್ಥಗಳನ್ನು ಸೇರಿಸಿನಂತರ ರುಬ್ಬಿ, ತುರಿದ ತೆಂಗಿನಕಾಯಿಯನ್ನು ಬೆರೆಸಿ ಪ್ರತಿ ಬಾರಿ ತಾಜಾವಾಗಿ ತಯಾರಿಸಿ.

ಔಷಧಿ ನೀಡುವ ಕ್ರಮ

ಬಾಯಿ, ನಾಲಿಗೆ ಹಾಗೂ ಅಂಗುಳಕ್ಕೆ ಹಚ್ಚಿ ದಿನಕ್ಕೆ 3 ಬಾರಿಯಂತೆ 3-5 ದಿನಗಳವರೆಗೆ ನೀಡಬೇಕು.

ಹತೋಟಿ ಕ್ರಮಗಳು

- ಆಕಳು ಮತ್ತು ಎಮ್ಮೆಗಳನ್ನು ಮತ್ತು ಅವುಗಳ ಕೆಚ್ಚಲನ್ನು ಸ್ವಚ್ಛವಾಗಿಡಬೇಕು.
- ಅವುಗಳನ್ನು ಕಟ್ಟುವ ಸ್ಥಳವು ಸ್ವಚ್ಛ ಹಾಗೂ ಒಣದಾಗಿರಬೇಕು.
- ಕೆಚ್ಚಲನ್ನು ಚೆನ್ನಾಗಿ ತೊಳೆದ ನಂತರ ಹಾಲನ್ನು ಹಿಂಡಬೇಕು.

- ಒಂದು ಆಕಳಿನ ಅಥವಾ ಎಮ್ಮೆಯ ಹಾಲನ್ನು ಹಿಂಡಿದ ನಂತರ ಗೌಳಿಯು ತನ್ನ ಕೈಗಳನ್ನು ಚೆನ್ನಾಗಿ ಸ್ವಚ್ಛ ಮಾಡಿ ಅವುಗಳನ್ನು ಸಾವಲಾನ್/ಡೆಟಾಲ್ ದ್ರಾವಣ-ದಲ್ಲಿ ಅದ್ದಿ ಬೇರೆ ಆಕಳಿನ/ಎಮ್ಮೆಯ ಹಾಲನ್ನು ಹಿಂಡಬೇಕು ಇದರಿಂದ ರೋಗ ಹರಡುವುದಿಲ್ಲ.

- ಹಾಲನ್ನು ಹಿಂಡಿದ ಮೇಲೆ ಮೊಲೆಯ ತೊಟ್ಟಿನ ತುದಿಯನ್ನು 1-2 ಚಮಚ ಸಾವಲಾನ್‌ನ್ನು 1 ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿದ ದ್ರಾವಣದಲ್ಲಿ 2-3 ನಿಮಿಷ ಅದ್ದಬೇಕು ಇದರಿಂದ ಸೂಕ್ಷ್ಮಾಣುಜೀವಿಗಳು ಕೆಚ್ಚಲಿನೊಳಗೆ ಹೋಗುವುದಿಲ್ಲ.



- ಆಕಳು ಅಥವಾ ಎಮ್ಮೆಯು ಕರು ಹಾಕುವುದಕ್ಕೆ 1-2 ತಿಂಗಳು ಮೊದಲೇ ತಜ್ಞರ ಸಲಹೆಯಂತೆ ಒಂದೊಂದು ಮೊಲೆಗೆ ಒಂದೊಂದು ಟ್ಯೂಬ್‌ನಲ್ಲಿರುವ ಔಷಧವನ್ನು ಹಾಕಿದರೆ ಈ ರೋಗವು ಕರು ಹಾಕಿದ ನಂತರ ಬಹುಶಃ ಬರುವುದಿಲ್ಲ, ಆಕಸ್ಮಾತ್ ಬಂದರೂ ಭಯಂಕರವಾಗಿ ಕಾಣಿಸಿಕೊಳ್ಳುವುದಿಲ್ಲ.
- ಕೆಚ್ಚಲು ಅಥವಾ ಮೊಲೆ ಮೇಲಿನ ಗಾಯಗಳನ್ನು ಅಲಕ್ಷಿಸದೇ ಚಿಕಿತ್ಸೆ ಕೊಡಿಸಲೇಬೇಕು.

ಪಶುಗಳ ಸಮತೋಲನ ಆಹಾರದ ವಿವರ

ಪಡಿತರ ಸಮತೋಲನ:-

→ ಒಣ ಮೇವು.
→ ಹಸಿರು ಮೇವು
→ ಕೇಂದ್ರೀಕರಿಸಿದ ಪದಾರ್ಥಗಳು/ಸಂಯೋಜಿತ ಫೀಡ್.
→ ಪೂರಕಗಳು (ಖನಿಜ, ವಿಟಮಿನ್)

ರಾಸುಗಳಿಗೆ ಪ್ರತಿನಿತ್ಯ ಕೊಡಬೇಕಾದ ಸಮತೋ-ಲನ ಪಶು ಆಹಾರ ಮಿಶ್ರಣ

#	ಮೇವು	ಆಹಾರ(ಕೆ.ಜಿ)	ಹಾಲು ಉತ್ಪಾದನೆ
1.	ಭತ್ತ/ಗೋಧಿ ಹುಲ್ಲು.	1-2	ಶೇ.50
2.	ರಾಗಿ ಹುಲ್ಲು/ಜೋಳದ ಕಡ್ಡಿ.	1-2	ಶೇ.40
3.	ಹುಲ್ಲು ಮತ್ತು ಹಸಿರು ಮೇವು.	ಬೇಕಿಲ್ಲ	ಶೇ.35
4	ಯಥೇಚ್ಛವಾಗಿ ಹಸಿರು ಮೇವು.	0.5-1.0	ಶೇ.30
5.	ಜೋಳದ ಮೇವು ಕೊಟ್ಟಾಗ	ಬೇಕಿಲ್ಲ	ಶೇ.25

#	ಆಹಾರದ ಸಾಮಗ್ರಿಗಳು	ಶೇಕಡಾಂಶ
1.	ಕಡಲೆಕಾಯಿ ಹಿಂಡಿ	25%
2.	ರವೆ ಬೂಸಿ	12%
3.	ಅಕ್ಕಿ ತೌಡು	20%
4.	ಕಡಲೆ/ಉದ್ದಿನ ಹಿಟ್ಟು	10%
5.	ಖನಿಜಾಂಶ ಮಿಶ್ರಣ.	02%
6.	ಸಾಮಾನ್ಯ ಉಪ್ಪು	01%

17/09/2024 12:18

ಮಣ್ಣಿನ ಪೋಷಣೆ

ಅಗತ್ಯ ಸಸ್ಯ ಪೋಷಕಾಂಶಗಳು

1. ಸಾರಜನಕ [N]
ಕಾರ್ಯ:
- ಬೆಳವಣಿಗೆ ಮತ್ತು ಅಭಿವೃದ್ಧಿ

2. ರಂಜಕ [P]
ಕಾರ್ಯ:
- ಬೇರು ಬೆಳವಣಿಗೆ



3. ಪೊಟ್ಯಾಷ್ [K]
ಕಾರ್ಯ:
- ಬರ ನಿರೋಧಕ

4. ಕ್ಯಾಲ್ಸಿಯಂ [Ca]
ಕಾರ್ಯ:
- ಕೋಶ ಗೋಡೆ ದಪ್ಪವಾಗುವುದು.

5. ಸಲ್ಫರ್ [S]
ಕಾರ್ಯ:
- ತೈಲ ಸಂಶ್ಲೇಷಣೆ

6. ಮೆಗ್ನೀಸಿಯಂ
ಕಾರ್ಯ:
- ಕ್ಲೋರೋಫಿಲ್ಲ ಕೇಂದ್ರ ಅಣು

7. ಸತು (Zn)
ಕಾರ್ಯ:
ಹಾರ್ಮೋನಗಳ ಸಂಶ್ಲೇಷಣೆ

8. ಬೋರಾನ್ [B]
ಕಾರ್ಯ:
- ಟರ್ಗರ್ ನಿರ್ವಹಣೆ

9. ಕಬ್ಬಿಣ [Fe]
ಕಾರ್ಯ:
- ಕ್ಲೋರೋಫಿಲ್ ಸಂಶ್ಲೇಷಣೆ



ಮಣ್ಣಿನ ರಸಸಾರ





ಸಸ್ಯದ ಬೆಳವಣಿಗೆಗೆ ಮಣ್ಣಿನ pH ಮುಖ್ಯವಾಗಿದೆ, ಏಕೆಂದರೆ ಇದು ಸಸ್ಯದ ಬೇರುಗಳಿಗೆ ಯಾವ ಪೋಷಕಾಂಶಗಳು ಲಭ್ಯವಿದೆ ಎಂಬುದನ್ನು ನಿರ್ಧರಿಸುತ್ತದೆ.

ರಸಗೊಬ್ಬರಗಳ ಪ್ರಕಾರ ಮತ್ತು ಅದನ್ನು ಹೇಗೆ ಬಳಸಲಾಗುತ್ತದೆ ಎಂಬುದರ ಆಧಾರದ ಮೇಲೆ ರಸಗೊಬ್ಬರಗಳು ಮಣ್ಣಿನ pH ಅನ್ನು ವಿವಿಧ ರೀತಿಯಲ್ಲಿ ಪರಿಣಾಮ ಬೀರುತ್ತವೆ.



$CaCO_3$

ಕ್ಯಾಲ್ಸಿಯಂ ಕಾರ್ಬೋನೇಟ್ (ಸುಣ್ಣ)

ಉದ್ದೇಶ: ಆಮ್ಲೀಯತೆಯನ್ನು ತಟಸ್ಥಗೊಳಿಸುತ್ತದೆ, pH ಅನ್ನು ಹೆಚ್ಚಿಸುತ್ತದೆ.

ಮೊತ್ತ: ವಿಶಿಷ್ಟವಾಗಿ, ಮಣ್ಣಿನ pH ಮತ್ತು ಬೆಳೆಯ ಅವಶ್ಯಕತೆಗಳನ್ನು ಅವಲಂಬಿಸಿ ಪ್ರತಿ ಎಕರೆಗೆ 1-2 ಟನ್.

$CaSO_4 \cdot 2H_2O$

ಜಿಪ್ಸಮ್

ಉದ್ದೇಶ: [ಜಿಪ್ಸಮ್ ಅನ್ನು] ಸೇರಿಸಿದರೆ ಮಣ್ಣಿನಲ್ಲಿ ಸೋಡಿಯಂ ಕಡಿಮೆ ಮಾಡುತ್ತದೆ.

ಮೊತ್ತ: ಪ್ರತಿ ಎಕರೆಗೆ 1-3 ಟನ್

ಸಮಗ್ರ ಪೋಷಕಾಂಶ ನಿರ್ವಹಣೆ



ಸುಸ್ಥಿರ ಮಣ್ಣಿನ ಆರೋಗ್ಯ ಮತ್ತು ಉತ್ಪಾದಕತೆಗಾಗಿ ಸಾವಯವ ಗೊಬ್ಬರಗಳು, ಜೈವಿಕ ಗೊಬ್ಬರಗಳು, ದ್ವಿದಳ ಧಾನ್ಯಗಳು ಮತ್ತು ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲಗಳೊಂದಿಗೆ ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ಸಮಗ್ರ ಪೋಷಕಾಂಶ ನಿರ್ವಹಣೆ ಎನ್ನುತ್ತಾರೆ.

- **ಪ್ರಯೋಜನಗಳು:-**

1> ಹೆಚ್ಚಿದ ಮಣ್ಣಿನ ಉತ್ಪಾದಕತೆ
2> ಮಣ್ಣಿನ ಆರೋಗ್ಯದಲ್ಲಿ ಸುಧಾರಣೆ
3> ರಸಗೊಬ್ಬರಗಳ ಅತ್ಯುತ್ತಮ ಬಳಕೆ.
4> ಮಣ್ಣಿನ ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣಲಕ್ಷಣಗಳಲ್ಲಿ ಸುಧಾರಣೆ.
5> ರೈತರ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ.

ಹಾಲು ಕರೆಯುವ ಯಂತ್ರ

ಆಧುನಿಕ ಹಾಲು ಕರೆಯುವ ಯಂತ್ರಗಳು ಹಸುಗಳನ್ನು ತ್ವರಿತವಾಗಿ ಹಾಗೂ ಪರಿಣಾಮಕಾರಿ ಹಾಲು ಕರೆಯುವ ಸಾಮರ್ಥ್ಯವನ್ನು ಹೊಂದಿದೆ.

ಯಂತ್ರದ ಮುಖ್ಯ ಕಾರ್ಯಗಳು:

- ಯಾವುದೇ ಹಾಲಿನ ವ್ಯರ್ಥವಿಲ್ಲದೆ ಕೆಚ್ಚಲಿನಿಂದ ಕ್ಯಾನಿಗೆ ಸರಳವಾಗಿ ಹಾಲನ್ನು ತುಂಬುತ್ತದೆ.
- ಕೆಚ್ಚಲನ್ನು ಮಸಾಜ್ ಮಾಡುತ್ತದೆ, ಕೆಚ್ಚಲಿನಲ್ಲಿ ರಕ್ತ ಮತ್ತು ದುಗ್ಧರಸ ದಟ್ಟಣೆಯನ್ನು ತಡೆಯುತ್ತದೆ.

ಕಾಲು ಬಾಯಿ ಜ್ವರ

ಕಾಲುಬಾಯಿ ಜ್ವರವು (ಗೆರಸಲು, ಗೂಬೆರೋಗ) ದನ, ಎಮ್ಮೆ, ಕುರಿ, ಆಡು, ಹಂದಿ ಮುಂತಾದ ಪ್ರಾಣಿಗಳಿಗೆ ಬರುವ ಜ್ವರದೋಪಾದಿಯ ತೀವ್ರ ಬೇನೆ, ಬಾಯಿಯಲ್ಲಿ, ಪಾದದಲ್ಲಿ, ಕೆಚ್ಚಲಿನ ಚರ್ಮದ ಮೇಲೆ, ಮೊಲೆತೊಟ್ಟಿನ ಮೇಲೆ ಗುಳ್ಳೆಗಳು ಸಿಡಿಯುವುದು ಈ ರೋಗದ ಲಕ್ಷಣ.

ರೋಗದ ಲಕ್ಷಣಗಳು:-

- ಸೋಂಕು ತಗುಲಿದ ಪ್ರಾಣಿಗೆ ಮಂಕು ಬಡಿಯುತ್ತದೆ ಅದು ಆಹಾರ ನಿರಾಕರಿಸುತ್ತದೆ.
- 104° ಇಂದ 105°F ಜ್ವರ ಬಂದು, ಕಾಲಿನಲ್ಲೂ ಬಾಯಿಯಲ್ಲೂ ಗುಳ್ಳೆಗಳು. ಕಾಣಿಸಿಕೊಳ್ಳುವವರೆಗೆ ಜ್ವರ ಇಳಿಯುವುದಿಲ್ಲ.
- ಪ್ರಾಣಿಯ ನಾಲಗೆ ಬಾಯಿಯ ಹೊರಚಾಚಿ ಜೊಲ್ಲು ಧಾರೆಯಾಗಿ ಬಾಯಿಯಿಂದ ದಾರದಂತೆ ಇಳಿಬೀಳುತ್ತದೆ.
- ಗುಳ್ಳೆಗಳು ಹೊಪ್ಪಳೆಯಾಗಿ ಒಡೆದು ಗಾಯಗಳಾಗುತ್ತದೆ. ಹುಣ್ಣುಗಳು ಕೆನ್ನೆಯ ಒಳಭಾಗದಲ್ಲಿ ನಾಲಿಗೆ ಮೇಲೆ ವಸಡಿನಲ್ಲಿ ಉಂಟಾಗುತ್ತದೆ.
- ಒಡೆದ ಗಾಯದಿಂದ ಹುಲುಹಳದಿ ಬಣ್ಣದ ಕೀವು ಹೊರಬರುತ್ತದೆ. ಅದಾದ 4-5 ದಿವಸಗಳ ಮೇಲೆ ಕಾಲಿನಲ್ಲಿ ಗುಳ್ಳೆಗಳು ಏಳುತ್ತವೆ. ಕುಂಟುವುದಕ್ಕೆ ಪ್ರಾರಂಭಿಸುತ್ತದೆ ಕಾಲನ್ನು ಆಗಾಗ ಝಾಡಿಸುತ್ತದೆ.

ದಿನಕ್ಕೆ ಮೂರು ಬಾರಿಯಂತೆ
ಮೂರು ರಿಂದ ಐದು
ದಿನ ಪುನಃ ಚಿಕಿತ್ಸೆ ಮಾಡಿ

ಕೆಚ್ಚಲು ಬಾವು

ನಾನಾ ಜಾತಿಯ ಸೂಕ್ಷ್ಮಾಣುಗಳಿಂದ ಈ ರೋಗವು ಆಕಳು ಮತ್ತು ಎಮ್ಮೆಯಲ್ಲಿ ಬರುತ್ತದೆ ಈ ರೋಗದಿಂದ ಹಾಲಿನ ಪ್ರಮಾಣವು ಕಡಿಮೆಯಾಗುತ್ತದೆ ಅಲ್ಲದೆ ಈ ರೋಗ-ದಿಂದ ಆಕಳುಗಳು ಸಾಯಬಹುದು ಮುಖ್ಯವಾಗಿ ಈ ರೋಗವು ಹಾಲನ್ನು ಹಿಂಡುವ ವ್ಯಕ್ತಿಯ ಕೈಗಳಿಂದ ಮತ್ತು ಹಾಲನ್ನು ಹಿಂಡುವ ಯಂತ್ರದಿಂದ ಬರುತ್ತದೆ ಮೊಲೆ ಮತ್ತು ಮೊಲೆ ತೊಟ್ಟಿನ ಮೇಲೆ ಗಾಯಗಳಾದಾಗ ವಿಷ ಕ್ರಿಮಿಗಳು ಮೊಲೆಗೆ ಹೋಗಿ ಕೆಚ್ಚಲು ಬಾವನ್ನು ಉಂಟು ಮಾಡುತ್ತವೆ ದನಗಳ ಮತ್ತು ಕೊಟ್ಟಿಗೆಯ ಸ್ವಚ್ಛತೆ ಕಾಪಾಡದಿದ್ದ-ರೆ, ಈ ರೋಗವು ಹರಡುತ್ತದೆ

ಲಕ್ಷಣಗಳು:-

* ಕೆಚ್ಚಲು ಬಾತುಕೊಂಡಿರುತ್ತದೆ ಹಾಗೂ ಕೆಚ್ಚಲಿಗೆ ನೋವಾಗುತ್ತದೆ ಮತ್ತು ಬಿಸಿಯಾಗಿರುತ್ತದೆ ಹಾಲು ಕೆಟ್ಟಿರುತ್ತದೆ
* ಹಾಲಿನಲ್ಲಿ ರಕ್ತ ಸಣ್ಣಗಡ್ಡೆಗಳು ಕಾಣಬಹುದು
* ಕೆಲವು ಆಕಳುಗಳಲ್ಲಿ ವಿಪರೀತ ಜ್ವರ ಕಾಣಬಹುದು
* ನೀರು/ಆಹಾರ ಸೇವನ ಇರದೇ ಇರಬಹುದು
* ಬೇನೆಯು ಬೇಗ ವಾಸಿಯಾಗದಿದ್ದರೆ ಕೆಚ್ಚಲು ಗಟ್ಟಿಯಾಗುತ್ತದೆ
* ಹಾಲಿನ ಪ್ರಮಾಣ ಬಹಳ ಕಡಿಮೆಯಾಗಿ ನೀರಿನ ತರಹ ಇರುತ್ತದೆ



17/09/2024 12:19

ಕೋಳಿಯ ರೋಗಗಳಿಗೆ ಹಾಕುವ ಲಸಿಕೆಗಳು

ಕಾಯಿಲೆ		ಲಸಿಕೆ
ಮ್ಯಾರೆಕ್ಸ	→	HVTM ಲಸಿಕೆ
ಕೊಕ್ಕರೆ	→	ರಾಣಿಕೇಟ್. F. ಲಸೋಟ
ಗುಂಬರೋಗ	→	IBD ಲಸಿಕೆ
ಕೋಳಿ ಸಿಡುಬು	→	ಕೋಳಿ ಸಿಡುಬಿನ ಲಸಿಕೆ
ಧ್ವನಿನಾಳ ಸೋಂಕು	→	ಐಬಿ (IB) ಲಸಿಕೆ

ಮ್ಯಾರೆಕ - 1ನೇ ದಿನ, ಕೊಕ್ಕರೆ- : 7 ನೇ ದಿನ,
ಗುಂಬರೋ - 21 ನೇ ದಿನ, ಧ್ವನಿನಾಳ - 28 · 30 ದಿನ
ಕೋಳಿ ಸಿಡುಬು - 7 · 8ನೇ ವಾರದಲ್ಲಿ.

17/09/202

ಒಣಮೇವುಗಳನ್ನು ಯೂರಿಯಾದಿಂದ ಪೌಷ್ಟೀಕರಿಸುವ ವಿಧಾನ

85 ltr ನೀರು

4 kg ಯೂರಿಯಾ

ಹರಡಿದ ಪಾಲಿಥೀನ್ ಶೀಟ್ ಮೇಲೆ 5kg ಒಣ ಮೇವನ್ನು ಹರಡಿ ತಯಾರಿಸಿದ ದ್ರಾವಣವನ್ನು ಸಿಂಪಡಿಸಿ

ಇನ್ನೊಂದು ಹುಲ್ಲಿನ ಪದರವನ್ನು ಹರಡಿ ದ್ರಾವಣವನ್ನು ಸಿಂಪಡಿಸಿ ಇದೇ ರೀತಿ 100kg ಹುಲ್ಲನ್ನು ಪದರ ಮಾಡಿ ಪಾಲಿಥೀನ್ ಶೀಟ್‌ನೊಂದಿಗೆ ಮುಚ್ಚಿ

೨೧ ದಿನಗಳ ನಂತರ ೩ ಘಂಟೆಗಳ ಕಾಲ ಯೂರಿಯಾ ವಾಸನೆಯನ್ನು ಹೋಗಲಾಡಿಸಲು ಪಾಲಿಥೀನ್ ಶೀಟ್ ತೆರೆದಿಡಿ.

6 ತಿಂಗಳು ಮೇಲ್ಪಟ್ಟ ಕರುಗಳಿಗೆ ಒಣಹುಲ್ಲಿನ ಆಹಾರ ಸೂಕ್ತ

3.2%
(40)
19.8%
(135)

ನೆಲ್ಲೂರ್

ತೂಕ - 25 - 30 kg/
ವರ್ಷಕ್ಕೆ

ಕೆಂಗುರಿ

ತೂಕ - 25-30 kg

ಡೆಕ್ಕಾನಿ

ಉಣ್ಣೆ ಇಳುವರಿ - 750-1000 kg
ದೂಂಸದ ಇಳುವರಿ - 45-50 %

ಯಳಗ

ತೂಕ = 40-50 kg
ಉಣ್ಣೆ = ಇರುವುದಿಲ್ಲ



ಮೆಹಸನ

ಫ್ಯಾಟ್ = 7%

ಹಾಲು = 1500-2000 Kg/ವರ್ಷ

ಮುರ್ರಾ

ಫ್ಯಾಟ್ - 6.5-8.5%

ಹಾಲು ಇಳುವರಿ = 1500-2200 kg/ವ



ಸುರತಿ

ಫ್ಯಾಟ್ = 7-7.5 %

ಹಾಲು ಇಳುವರಿ = 1500-1600 Kg/ವರ್ಷ

ನಾಗಪುರಿ

ಫ್ಯಾಟ್ = 7-8.5 %

ಹಾಲು ಇಳುವರಿ = 1000 Kg/ವರ್ಷ

ಜಫರಬಾದಿ

ಫ್ಯಾಟ್ = 7.6%

ಹಾಲಿನ ಇಳುವರಿ = 2000 kg/ವರ್ಷ

ತಲೆಯಿಂದ
ತಲೆಯ
ದನದ ಕೊಟ್ಟಿಗೆ
17/09/2024 12:22

ಬಾಲದಿಂದ
ಬಾಲದ
ದನದ ಕೊಟ್ಟಿಗೆ
17/09/2024 12:23



ಕಿಲಾರಿ

ಫ್ಯಾಟ್ - 4.2%

ಹಾಲು - 451 Kg/ವರ್ಷ



ಎಚ್. ಎಫ್

ಫ್ಯಾಟ್ - 3-3.5% ಹಾಲು - 6000 - 8000 Kg/ವರ್ಷ

ಜೆರ್ಸಿ

ಫ್ಯಾಟ್ಸ = 5.4%

ಹಾಲಿನ ಇಳುವರಿ = 4000-5000 kg/ವ.

ಗಿರ್ M.F 4.60

ಹಾಲು - 800 l/ದಿನಕ್ಕೆ

ರೆಡ್ ಸಿಂಧಿ

ಹಾಲು - 2000 kg / ವರ್ಷಕ್ಕೆ

ಫ್ಯಾಟ್ - 4 - 5.2%



ಕಾಂಗಾಯಂ

ಫ್ಯಾಟ್ - 3.9%

ಹಾಲು - 540 kg / ವರ್ಷ

ಸಾಹಿವಾಲ

ಹಾಲಿನ ಇಳುವರಿ - 2200-2500 kg / ವರ್ಷ

ಫ್ಯಾಟ್ - 6%

ಕಾಂಗಾಯಂ

ಫ್ಯಾಟ್ - 3.9%

ಹಾಲು - 540 kg/ವರ್ಷ

ಸಹಿವಾಲ

ಹಾಲಿನ ಇಳುವರಿ - 2200-2500 kg/ವರ್ಷ

ಫ್ಯಾಟ್ - 6%

ಪುಂಗನೂರು

ಫ್ಯಾಟ್ - 8%

ಹಾಲಿನ ಇಳುವರಿ

3 ರಿಂದ 5L/ದಿನಕ್ಕೆ